ಎರಡು ತಿಂಗಳ ಪ್ರಗತಿಯನ್ನು ತಾವು ಕೊಡುತ್ತಿದ್ದೀರಿ. ಏಕೆ? ನಾನು ನಿಮ್ಮ ಮೇಲೆ ಆರೋಪವನ್ನು ಮಾಡುತ್ತಿಲ್ಲ. ಅಧಿಕಾರಿಗಳು ತಮಗೆ ದಾರಿ ತಪ್ಪಿಸುತ್ತಿದ್ದಾರೆ. ಈಗ ನಮಗೆ ನೀವು 2009–10 ನೇ ಸಾಲಿನಲ್ಲಿ ಏನು ಪ್ರಗತಿಯಾಗಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಕೊಡಿ. ಆಗ ಪ್ರಶ್ನೆಗೆ ಉತ್ತರ ಸರಿ ಬರುತ್ತದೆ.

ಶ್ರೀ ಬಿ.ಶ್ರೀರಾಮುಲು :– 2009–10ನೇ ಸಾಲಿನಲ್ಲಿ 125% ಆಗಿದೆ. 100% ಆಗ ಬೇಕಾಗಿತ್ತು. 125% ಆಗಿದೆ. ಏಕೆಂದರೆ ಕಳೆದ ಬಾರಿಯ closing balance ಏನಿತ್ತು ಅದನ್ನು opening balance ಎಂದು ತೆಗೆದುಕೊಂಡೆ ಕಾರಣ ಅದನ್ನು ಸೇರಿಸಿ ಕಳೆದ ಕಾಲಿನದ್ದನ್ನು ತೆಗೆದುಕೊಂಡ ಕಾರಣ 125% ಪ್ರಗತಿಯಾಗಿದೆ.

ಶ್ರೀ ದಿನೇಶ್ ಗುಂಡುರಾವ್ :– ಮಾನ್ಯ ಅಧ್ಯಕ್ಷರೆ, ಪ್ರಶ್ನೆಯಲ್ಲಿ ಮಾತ್ರ ಸ್ಪಷ್ಟತೆ ಕಂಡುಬರುತ್ತಿದೆ. ಆದರೆ ಮಾನ್ಯ ಸಚಿವರ ಉತ್ತರದಲ್ಲಿ ಸ್ಪಷ್ಟತೆ ಇಲ್ಲ. ಬಹುಶಃ ಇದರ ಬಗ್ಗೆ ಮಾನ್ಯ ಮಂತ್ರಿಗಳು ಅಧಿಕಾರಿಗಳನ್ನು ಮತ್ತೊಮ್ಮೆ ಕೇಳಿ ಇದರ ಬಗ್ಗೆ ಉತ್ತರ ಕೊಡುವುದು ಒಳ್ಳೆಯದು.

ಶ್ರೀ ಬಿ.ಶ್ರೀರಾಮುಲು :– ಆಯಿತು ಸಾರ್. ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು :– ಸಿದ್ದು ಸವದಿಯವರೆ, ಉಪ ಪ್ರಶ್ನೆ ಕೇಳುವುದು ಏನಾದರೂ ಇದ್ದರೆ ಕೇಳಿ.

ಶ್ರೀ ಸಿದ್ದು ಸವದಿ :– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಎರಡು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಬೇಕೆಂದು ಒಂದು ಮನವಿಯನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಮಂಜೂರಾತಿಯನ್ನು ಕೊಡುವ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಬಿ.ಶ್ರೀರಾಮುಲು :– ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನಾನು ಅವರ ಮನವಿಯನ್ನು ನೋಡಿಯೇ ಅದಕ್ಕೆ ಯಾವ ರೀತಿಯ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆಂದು ಮುಂದೆ ಹೇಳಬೇಕಾಗುತ್ತದೆ.

ಮಂಡ್ಯ ವೈದ್ಯಕೀಯ ಕಾಲೇಜನ್ನು ಉನ್ನತೀಕರಿಸುವ ಬಗ್ಗೆ

2 (146) ಶ್ರೀ ಎಂ.ಶ್ರೀನಿವಾಸ್ (ಮಂಡ್ಯ)

ಶ್ರೀ ರಾಮಚಂದ್ರ ಗೌಡ (ವೈದ್ಯಕೀಯ ಶಿಕ್ಷಣ ಸಚಿವರು)

(ಅ) ಮಂಡ್ಯ ವೈದ್ಯಕೀಯ ಕಾಲೇಜನ್ನು ಉನ್ನತೀಕರಿಸುವ ಪ್ರಾಸ್ತಾವನೆ ಸರ್ಕಾರದ ಮುಂದಿದೆಯೇ;

ಇಲ್ಲ

(ಆ) ಹಾಗಿದ್ದಲ್ಲಿ ಯಾವಾಗ ಉನ್ನತೀಕರಿಸಲಾಗುವುದು;

ಉದ್ಭವಿಸುವುದಿಲ್ಲ

(ಇ) ಮಂಡ್ಯ ವೈದ್ಯಕೀಯ ಕಾಲೇಜಿಗೆ ಕಟ್ಟಡ ಹಾಗೂ ಮೂಲಬೂತ ಸೌಲಭ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕೊರತೆ ಇರುವುದಿಲ್ಲ

(ಈ) ಹಾಗಿದ್ದಲ್ಲಿ ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಉದ್ಭವಿಸುವುದಿಲ್ಲ

(ಉ) ಮಂಡ್ಯ ವೈದ್ಯಕೀಯ ಕಾಲೇಜನ್ನು ಹೈಟೆಕ್ ಆಸ್ಪತ್ರೆಯನ್ನಾಗೆ ಮಾರ್ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇಲ್ಲ

(ಊ) ಮಂಡ್ಯ ವೈದ್ಯಕೀಯ ಕಾಲೇಜನ್ನು ಹೈಟೆಕ್ ಆಸ್ಪತ್ರೆಯನ್ನಾಗಿ ಮಾರ್ಪಡಿಸಲು ಗೌರ್ನಿಂಗ್ ಕೌನ್ಸಿಲ್ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು ನಿಜವೇ;

ಇಲ್ಲ

(ಋ) ಹಾಗಿದ್ದಲ್ಲಿ ಯಾವಾಗ ಹೈಟೆಕ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗುವುದು;

ಉದ್ಭವಿಸುವುದಿಲ್ಲ

(ಎ) ಹೈಟೆಕ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಸರ್ಕಾರ ಬಿಡುಗಡೆ ಮಾಡುವ ಅನುದಾನದ ಮೊತ್ತ ಎಷ್ಟು? ವಿವರಗಳನ್ನು ನೀಡುವುದು;

ಉದ್ಭವಿಸುವುದಿಲ್ಲ

ಶ್ರೀ ಎಂ.ಶ್ರೀನಿವಾಸ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರುವ ಉತ್ತರ ಅಪೂರ್ಣವಾಗಿದೆ. ಅದು ಪರಿಪೂರ್ಣವಾಗಿಲ್ಲವೆಂದು ಹೇಳಿರುವುದಕ್ಕೆ ಕಾರಣವೇನೆಂದರೆ, 2009-10ನೇ ಸಾಲಿನಲ್ಲಿ ಮೊದಲನೆ ವರ್ಷದ ಎಂ.ಬಿ.ಬಿ.ಎಸ್.ತರಗತಿಗೆ ವಿದ್ಯಾರ್ಥಿಗಳನ್ನು ಅಡ್ಮಿಷನ್ ಮಾಡಿಕೊಳ್ಳುವುದನ್ನು ಐ.ಎಂ.ಸಿ.ಯವರು ನಿರಾಕರಣೆ ಮಾಡಿದ್ದಾರೆ. ಇದಿಷ್ಟೇ ಸಾಕು, ಈ ಮೆಡಿಕಲ್ ಕಾಳೆಜಿನಲ್ಲಿ ಯಾವ ಮೂಲಭೂತ ಸೌಕರ್ಯಗಳು ಇಲ್ಲ ಮತ್ತು ಬೇರೆ ಅಗತ್ಯ ವ್ಯವಸ್ಥೆಗಳು ಕೂಡ insufficient ಇದೆ ಎಂಬುದು ಗೊತ್ತಾಗುತ್ತದೆ. ಇದರ ಜೊತೆಗೆ 441 ಬೆಡ್ಡುಗಳು ಮಾತ್ರ ಜಿಲ್ಲಾ ಆಸ್ಪತ್ರೆಯಲ್ಲಿ ಇದೆ. minimum 750 ಬೆಡ್‌ಗಳು ಇರಬೇಕೆಂದು IMC ಯುವರು ಹೇಳಿದ್ದಾರೆ. ಇದರ ಜೊತೆಗೆ ಅಲ್ಲಿ 450 ಜನರು ಒಳರೋಗಿಗಳು ಇದ್ದರೆ ಪ್ರತಿದಿನ 1000 ಜನರು ಹೊರರೋಗಿಗಳಾಗಿ ಅಲ್ಲಿಗೆ ಬರುತ್ತಿದ್ದಾರೆ. ಅವರಿಗೆ ಮೂಲಭೂತ ಸೌಕರ್ಯಗಳು ಏನೇನೂ ಇಲ್ಲ. ಅಲ್ಲಿಗೆ ವರ್ಷಕ್ಕೆ ಕೇವಲ 30 ಲಕ್ಷ ರೂಪಾಯಿಗಳ ಮೆಡಿಸನ್‌ಗಳನ್ನು ಕೊಟ್ಟಿದ್ದಾರೆ. ಇವೆಲ್ಲದರ ಜೊತೆಗೆ ವೈದ್ಯರ ವಸತಿ ಕೊಠಡಿಗಳ ನಿರ್ಮಾಣ ಕೂಡ ಅಪೂರ್ಣವಾಗಿದೆ. ನರ್ಸಿಂಗ್‌ಗಾಗಿ ವಸತಿ ಗೃಹಗಳನ್ನು ಕಟ್ಟುವುದನ್ನು ಇನ್ನೂ ಪ್ರಾರಂಭವನ್ನೇ ಮಾಡಿಲ್ಲ. ಇದರ ಜೊತೆಗೆ ಐ.ಎಂ.ಸಿ.ಯವರು ಹೇಳಿರುವಂತೆ ಪ್ರಾಯೋಗಿಕ ಮನೆಯನ್ನು ಕಟ್ಟುವ ಕೆಲಸವನ್ನು ಇನ್ನೂ ಪ್ರಾರಂಭವನ್ನೇ ಮಾಡಿಲ್ಲ. ಕ್ಯಾಂಟೀನ್ ವ್ಯವಸ್ಥೆ ಇಲ್ಲ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಕಟ್ಟುವುದಕ್ಕೆ 40 ಕೋಟಿ ರೂಪಾಯಿಗಳ ಅಂದಾಜನ್ನು ಮಾಡಿದ್ದಾರೆ. ಇನ್ನೂ ಅದನ್ನು ಪ್ರಾರಂಭವನ್ನೇ ಮಾಡಿಸಲಿಲ್ಲ. ಇವೆಲ್ಲವನ್ನು ನೋಡಿಕೊಂಡೇ ಐ.ಎಂ.ಸಿ. ಯವರು ಮೊದಲನೆ ವರ್ಷದ

ಎಂ.ಬಿ.ಬಿ.ಎಸ್.ಪ್ರವೇಶವನ್ನು ಮಾಡಿಕೊಳ್ಳುವುದನ್ನು ನಿರಾಕರಿಸಿದ್ದಾರೆ. ಆದರೆ ಉತ್ತರದಲ್ಲಿ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಇದಕ್ಕೆ ಸರಿಯಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಬಯಸುತ್ತೇನೆ.

ಶ್ರೀ ರಾಮಚಂದ್ರ ಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಇದು ಹೊಸ ಕಾಲೇಜ್, ಕಳೆದ ವರ್ಷ ಕೂಡ Recognition ಕೊಡಬೇಕಾದರೆ ಐ.ಎಂ.ಸಿ.ಯವರು ತಡ ಮಾಡಿದರು. ಈಗಾಗಲೇ ನಿನ್ನೆ ತೀರ್ಮಾನವಾಗಿದೆ, Recognition ಬಂದಿದೆ, ನಿನ್ನೆ ಮೀಟಿಂಗ್‌ನಲ್ಲಿ ಈ ತೀರ್ಮಾನವಾಗಿದ್ದು ಅದರ ಬಗ್ಗೆ ನಾಳೆ ಬರುತ್ತದೆ. ಇನ್ನು ನಾವು ಆಸ್ಪತ್ರೆಯನ್ನು up gradation ಮಾಡುತ್ತೇವೆಂದು ಹೇಳಿದ್ದೇವೆಯೇ ವಿನಃ Hi-tech or Super Speciality Hospital ಮಾಡುತ್ತೇವೆಂದು ನಾವೇನು ಹೇಳಿಲ್ಲ. ಈಗ 450 ಬೆಡ್‌ಗಳು ಇರುವುದನ್ನು 500 ಬೆಡ್‌ಗಳಿಗೆ ಏರಿಸುವುದಕ್ಕೆ ಎಲ್ಲ ವ್ಯವಸ್ಥೆಗಳನ್ನು ಮಾಡಿದ್ದೇವೆ. ಯಾವುದೇ ಸಂದರ್ಭದಲ್ಲಿಯೂ ಏನೂ ಸಮಸ್ಯೆ ಇಲ್ಲ. ನಮಗೆ ಇಡೀ ರಾಜ್ಯದಲ್ಲಿ ಕಾಲೇಜುಗಳಲ್ಲಿ ಅಧ್ಯಾಪಕರ ಕೊರತೆ ಇತ್ತು. ಅಧ್ಯಾಪಕರ ಕೊರತೆಯನ್ನು ನೀಗಿಸಲು ನಾವು ಅಧ್ಯಾಪಕರ ಹುದ್ದೆಗಳನ್ನು ತುಂಬುತ್ತಿದ್ದೇವೆ. ಹಿಂದೆ 19% ಇದ್ದದ್ದನ್ನು ಈಗ ನಾವು 11% ಗೆ ಇಳಿಸಿದ್ದೇವೆ. ನಿನ್ನೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿತರಕ್ಕಂಥ 10 ಕಾಲೇಜುಗಳಲ್ಲಿ ಬೀದರ್ ಕಾಲೇಜ್ ಬಗ್ಗೆ ಮಾತ್ರ ಇನ್ನೂ ನಮಗೆ ಪರ್ಮಿಶನ್ ಬರಬೇಕಾಗಿದೆ, ಬಾಕಿ ಉಳಿದ ಎಲ್ಲ ಕಾಲೇಜುಗಳಿಗೂ ಪರ್ಮಿಶನ್ ನಮಗೆ ಬಂದಿದೆ. ಬೀದರ್ ಬಗ್ಗೆ ಕೂಡ ಈಗಾಗಲೇ ನಾವು ಪೋಸ್ಟ್‌ಗಳನ್ನು ಪ್ರಾನ್ಸ್‌ಫರ್ ಮಾಡಿ ಅಗತ್ಯ ಸ್ಟಾಫ್‌ನ್ನು ಕೊಟ್ಟಿದ್ದೇವೆ. ಅದುದರಿಂದ ಆ ಕಾಲೇಜ್ ಬಗ್ಗೆ ಕೂಡ ನಾಳೆ ಅಥವಾ ನಾಡಿದ್ದು ಮೀಟಿಂಗ್‌ನಲ್ಲಿ ತೀರ್ಮಾನವಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು :– ರೇವಣ್ಣನವರೆ, ಮಂಡ್ಯದ ಬಗ್ಗೆ ಮಾತ್ರ ಈ ಪ್ರಶ್ನೆ ಇರುವುದು. ಅದರ ಬಗ್ಗೆ ಹೇಳಿ. ಅದನ್ನು ಬಿಟ್ಟು ಬೀದರ್, ಬೆಳಗಾಂ ಎಂದು ಹೇಳಬೇಡಿ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರೇ ಮಂಡ್ಯದ್ದನ್ನು ಬಿಟ್ಟು ಬೀದರ್ ಬಗ್ಗೆ ಇನ್ನೂ ಪರ್ಮಿಶನ್ ಸಿಕ್ಕಿಲದಲವೆಂದು ಹೇಳಿದ್ದರಿಂದ ನಾನು ಹೇಳಿತ್ತಿದ್ದೇನೆ. ಏಕೆಂದರೆ ಬೀದರ್ ಬಹಳ ಹಿಂದುಳಿದಿರುವ ಪ್ರದೇಶವಾಗಿದೆ. ಮಾನ್ಯ ಸಚಿವರು ಹೇಳಿದ್ದನ್ನು ಕೇಳಿದರೆ ಆ ಭಾಗದ ಜನರಿಗೆ ಸಂದೇಶ ಏನು ಹೋಗುತ್ತದೆಂದರೆ, ಬೇರೆ ಕಾಲೇಜ್‌ಗಳ ಬಗ್ಗೆ ಪರ್ಮಿಶನ್ ಮಾಡಿಸಿಕೊಂಡರು, ಆದರೆ ಬೀದರ್ ಕಾಲೇಜ್ ಬಗ್ಗೆ ಯಾರೂ ಮಾತನಾಡಲೇ ಇಲ್ಲ ಎನ್ನುವ ಭಾವನೆ ಬರುತ್ತದೆ. ಆ ರೀತಿ ಬರುವುದು ಬೇಡ. ದಯಮಾಡಿ ಆ ಕಾಲೇಜ್ ಪ್ರಾರಂಭ ಮಾಡುವುದಕ್ಕೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ಎನ್ನುವ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಅಧ್ಯಕ್ಷರು :- ಬೀದರ್ ಕಾಲೇಜ್ ಬಗ್ಗೆಯೇ ಅವರು ಪ್ರತ್ಯೇಕ ಪ್ರಶ್ನೆಯನ್ನು ಕೇಳಲಿ.

ಶ್ರೀ ರಾಮಚಂದ್ರಗೌಡ :- ಈಗಾಗಲೇ ಕಾಲೇಜ್ ಪ್ರಾರಂಭವಾಗಿದೆ. ಅಧ್ಯಾಪಕರ Shortage ಏನಿತ್ತು ಅದನ್ನು ಈಗಾಗಲೇ fill up ಮಾಡಿದ್ದೇವೆ. ಅದಕ್ಕೂ ಈಗ ಮನ್ನಣೆ ಬರುತ್ತಿದೆ.

ಶ್ರೀ ಹೆಚ್.ಡಿ.ರೇವಣ್ಣ :- ಮಂಡ್ಯ ಕಾಲೇಜ್‌ನಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಬಾಕಿ ಇರುವ ಕೆಲಸಗಳನ್ನು ಯಾವಾಗ ಮುಗಿಸುತ್ತೀರಿ? ಅದಕ್ಕೇನಾದರೂ ಕಾಲಮಿತಿಯನ್ನು ಹಾಕಿಕೊಂಡಿದ್ದೀರ?

ಶ್ರೀ ಹೆಚ್.ಡಿ.ರೇವಣ್ಣ :- ಅಲ್ಲಿ ಮೂಲಭೂತ ಸೌಕರ್ಯ ಬೇಕಲ್ಲ, ಅಲ್ಲಿ ಬಾಕಿ ಕೆಲಸವನ್ನು ನೀವು ಯಾವಾಗ ಮುಗಿಸುತ್ತೀರಿ? ಅದಕ್ಕೆ ಏನಾದರೂ ಕಾಲಮಿತಿ ಹಾಕಿಕೊಂಡಿದ್ದಾರೆಯೇ? ಏಕೆಂದರೆ ಮುಂದಿನ ವರ್ಷ ಇದೇ ರೀತಿ shortage ಆಯಿತು ಎಂದು ಬರುವುದು ಬೇಡ. ಮಂಡ್ಯ ಕಾಲೇಜು ಬಗ್ಗೆ ಹೇಳಿ.

ಶ್ರೀ ರಾಮಚಂದ್ರಗೌಡ :- ಮಂಡ್ಯ ಕಾಲೇಜಿನಲ್ಲಿ ಎಲ್ಲಾ ಕೆಲಸ ಆಗಿದೆ. ಅಲ್ಲಿ ಹಣ ಬಿಡುಗಡೆಯಾಗಿದೆ. ಯಾವದೇ ಸಮಸ್ಯೆ ಇಲ್ಲ.

ಶ್ರೀ ಬಂಡೆಪ್ಪ ಕಾಶಂಪೂರ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ, ಆರು ಕಾಲೇಜುಗಳಲ್ಲಿ ಮೊದಲು ಸಿಕ್ಕಿದ್ದು ಬೀದರ್‌ನ ಒಂದೇ ಎಂದು ಕಾಲೇಜಿಗೆ. ಆಗ ನಾನು ಮಂತ್ರಿಯಾಗಿದ್ದೇನೆ. ಈಗ ಎಲ್ಲಾ ಆಗಿ ಬೀದರ್ ಉಳಿದಿದೆಯೆಂದರೆ, ಆ ಭಾಗಕ್ಕೆ ಎಷ್ಟು ಕಾಳಜಿ ವಹಿಸುತ್ತಿದ್ದಾರೆ ಎಂದು ಗೊತ್ತಾಗುತ್ತದೆ. ಮಾನ್ಯ ಮಂತ್ರಿಗಳಿಗೆ ಕೇಳಿಕೊಳ್ಳುವುದೇನೆಂದರೆ ಎಲ್ಲದಕ್ಕಿಂತ ಮೊದಲು ಆ ಭಾಗಕ್ಕೆ ನ್ಯಾಯ ಒದಗಿಸಿ ಎಂದು ಹೇಳುತ್ತಿದ್ದೇನೆ.

ಶ್ರೀ ರಾಮಚಂದ್ರಗೌಡ : ಹೊರಗಡೆ ರಾಜ್ಯದಿಂದ ಪ್ರೊಫೆಸರುಗಳನ್ನು ತಂದಿದ್ದೆವು. ಅವರು ಏಕಾಏಕಿ ಬಿಟ್ಟು ಹೋಗಿದ್ದಾರೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ನಾನು ಬೆಳಗಾವಿ ಮೆಡಿಕಲ್ ಕಾಲೇಜು ಬಗ್ಗೆ ಕೇಳುತ್ತೇನೆ.

ಅಧ್ಯಕ್ಷರು :- ಬೇಡ, ಆಮೇಲೆ ಇಡೀ ರಾಜ್ಯದ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಅವರು ಕೇಳಿದ್ದು ಮಂಡ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ, ಎಂ.ಶ್ರೀನಿವಾಸ್‌ರವರೇ ತಾವು ಇನ್ನೊಂದು ಉಪಪ್ರಶ್ನೆ ಏನಾದರೂ ಇದ್ದರೆ ಕೇಳಿ.

ಶ್ರೀ ಎಂ.ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೇ, ಮಂಡ್ಯ ಮೆಡಿಕಲ್ ಕಾಲೇಜ್ ಎಲ್ಲಾ ಅಪೂರ್ಣವಾಗಿದೆ. ಅಲ್ಲಿ ಕಟ್ಟಡ ಮಾರ್ಣವಾಗಿದೆ ಎಂದು ಹೇಳಿದ್ದಾರೆ, ಆದರೆ ಅಲ್ಲಿ ಪೂರ್ಣವಾಗಿಲ್ಲ, ಅಲ್ಲಿ ಕಟ್ಟಡಗಳನ್ನು ಯಾವಾಗ ಪೂರ್ಣ ಮಾಡುತ್ತಾರೆಂದು ಮಾನ್ಯ ಸಚಿವರು ಹೇಳಬೇಕು.

ಶ್ರೀ ರಾಮಚಂದ್ರಗೌಡ : ಅದಕ್ಕೆ ಬೇಕಾದಂತಹ ಹಣ ಎಲ್ಲಾ ಬಿಡುಗಡೆಯಾಗಿದೆ, ಪೂರ್ತಿಯಾಗಿದೆ, ಇನ್ನು ಸ್ವಲ್ಪ ದಿವಸಗಳಲ್ಲಿ finish ಆಗಿಬಿಡುತ್ತದೆ. ಏನೂ ಸಮಸ್ಯೆ ಇಲ್ಲ.

ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ.

3 (34) ಶ್ರೀ ಪಆಡೀಲ್ ಎ.ಎಸ್.(ನಡಹಳ್ಳಿ) (ದೇವರಹಿಪ್ಪರಗಿ)
ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ಯೋಜನೆ ಇದೆಯೇ;

ಇಲ್ಲ.

ಮಾರ್ಗಸೂಚಿಗಳನ್ವಯ ಬಿಜಾಪುರ ಜಿಲ್ಲೆಯಲ್ಲಿ ಒಟ್ಟು 12 ಸಮುದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಬೇಕಿದ್ದು, ಈಗಾಗಲೇ 13 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಆದುದರಿಂದ ಹೊಸದಾಗಿ ಸಮುದಾಯ ಆರೋಗ್ಯ ಕೇಂದ್ರಗಳನ್ನು ಈ ಜಿಲ್ಲೆಯಲ್ಲಿ ಪ್ರಾರಂಭಿಸಲು ಅವಕಾಶವಿರುವುದಿಲ್ಲ.

ಆ. ಹಾಗಿದ್ದಲ್ಲಿ, ಬಿಜಾಪುರ ಜಿಲ್ಲೆಯಲ್ಲಿ ಯಾವ ಯಾವ ಸರ್ಕಾರಿ ಆಸ್ಪತೆಗಳು ಮೇಲ್ದರ್ಜೆಗೇರಿಸಲಾಗುತ್ತಿದೆ; ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು.

ಉದ್ಭವಿಸವುದಿಲ್ಲ.

ಇ. ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯ ದೇವರಹಿಪ್ಪರಗಿ ಕಲಕೇರಿ, ಹೂವಿನಹಿಪ್ಪರಗಿ, ಸ್ಪತ್ರೆಗಳು ಮೇಲ್ದರ್ಜೆಗೇರಿಸಲಾಗುತ್ತಿದೆಯೇ; ಹಾಗಿಲ್ಲದಿದ್ದಲ್ಲಿ, ಕಾರಣಗಳೇನು; ವಿವರ ನೀಡುವುದು.

ಉದ್ಭವಿಸವುದಿಲ್ಲ.

ಈ. ದೇವರಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯ ಕಲಕೇರಿ ಆಸ್ಪತ್ರೆಯಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಸಂಥಾನ ಹರಣ ಶಸ್ತಚಿಕಿತ್ಸೆಗಳಾಗಿವೆ, ಶಸ್ತಚಿಕಿತ್ಸೆ ಪಡೆದವರ ಗ್ರಾಮ, ಹೆಸರು (ಪುರುಷ ಮತ್ತು ಸ್ತ್ರೀ) ಪ್ರತ್ಯೇಕ ಹೆಸರು ಮತ್ತು ವಿವರ ನೀಡುವುದು;

ವಿವರಗಳನ್ನು ಅನುಬಂಧ–1 ರಲ್ಲಿ ಲಗುತ್ತಿಸಲಾಗಿದೆ.

ಉ. ಸದರಿ ಕಲಕೇರಿ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯರಿಲ್ಲದೇ ಸ್ಥಳೀಯ ಮಹಿಳೆಯರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಮಹಿಳಾ ವೈದ್ಯರ ನೇಮಕ್ಕೆ ಸರ್ಕಾರ ಕೈಗೊಂಡ ಕ್ರಮವೇನು; ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಮಹಿಳಾ ವೈದ್ಯರ ನೇಮಕಕ್ಕೆ ಸರ್ಕಾರ ಕೈಗೊಂಡ ಕ್ರಮವೇನು;

ಬಂದಿದೆ.